## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಸ್ವಾಧೀನ ಪಡಿಸಕೊಂಡ ಜಮೀನುಗಳಿಗೆ ಸಿವಿಲ್ ನ್ಯಾಯಾಲಯ ತೀರ್ಪಿನ ಮೇರೆಗೆ ಪರಿಹಾರ ಧನವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸುವ ಬಗ್ಗೆ.

ಓದಲಾಗಿದೆ: ಉಪವಿಭಾಗಾಧಿಕಾರಿ, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ: ಎಲ್ಎಕ್ಯೂ/ಎಸ್ ಆರ್/1661, ದಿನಾಂಕ:23.07.2021.

******

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರದಲ್ಲಿ ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಉಪ ವಿಭಾಗ, ಬೆಳಗಾವಿ ಇವರು ಬೆಳಗಾವಿ ತಾಲೂಕಿನ ಸಾಂಬ್ರಾ ಗ್ರಾಮದ ಹದ್ದಿಯಲ್ಲಿ ಬರುವ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಕುರಿತು ಭೂಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಜಮೀನುಗಳ ಹೆಚ್ಚಿನ ಬೆಲೆ ನಿರ್ಧರಣೆ ಕುರಿತು. ಈ ಕೆಳಕಾಣಿಸಿದ ಎಲ್.ಎ.ಸಿ ಗಳಿಗೆ ಸಂಬಂಧಿಸಿದಂತೆ ಮಾನ್ಯ 1ನೇ ಅಧಿಕ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಬೆಳಗಾವಿ ಇವರಲ್ಲಿ ದಾಖಲಾಗಿದ್ದು, ಪ್ರತಿ ಗುಂಟೆಗೆ ಜಮೀನಿನ ಮೌಲ್ಯ ರೂ.18,150-00ಗಳಂತೆ ನಿರ್ಧರಣೆ ಮಾಡಿ ಇನ್ನಿತರ ಸೌಲಭ್ಯಗಳನ್ನು ಒದಗಿಸಲು ನಿರ್ದೇಶನ ನೀಡಿದ್ದರನ್ವಯ ಈಗಾಗಲೇ ದಿನಾಂಕ:25.11.2019 ರಂದು ಪರಿಹಾರ ಧನವನ್ನು ಮಾನ್ಯ ನ್ಯಾಯಾಲಯಕ್ಕೆ ಪಾವತಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠ ಧಾರವಾಡ ಇಲ್ಲಿ ಎಮ್.ಎಫ್.ಎ ಸಂಖ್ಯೆ:102330/1018 c/w 102329/2018 c/w 102331/2018 (ಎಲ್.ಎ.ಸಿ) ದಾಖಲಿಸಿದ್ದು ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಪ್ರತಿ ಗುಂಟೆಗೆ ರೂ.33,600-00 ಗಳಂತೆ ದರ ನಿರ್ಧರಿಸಿ ಇದರೊಂದಿಗೆ ಇನ್ನಿತರ ಸೌಲಭ್ಯಗಳನ್ನು ಒದಗಿಸಲು ನಿರ್ದೇಶನ ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಪರಿಹಾರ ಧನ ಬಿಡುಗಡೆ ಮಾಡಲು ಈ ಕೆಳಕಂಡ ಲೆಕ್ಕದ ತಃಖ್ತೆಯನ್ನು ಜೂಲೈ 31 2021ರವರೆಗೆ ತಯಾರಿಸಿ ಪರಿಹಾರ ಮೊತ್ತವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

| ಅ ನಂ. | ಎಲ್.ಎ.ಸಿ. ಸಂಖ್ಯೆ | ಇ.ಪಿ. ಕ್ರಮಾಂಕ | ಗ್ರಾಮ | ರಿಸ ನಂ | ಕ್ಷೇತ್ರ ಎ-ಗುಂ-ಆ | ಮೊತ್ತ ರೂಗಳಲ್ಲಿ |
|---|---|---|---|---|---|---|
| 1 | 31/2008 | 92/2018 | ಸಾಂಬ್ರಾ | 96/2ಎ | 1-32-8 | 72,75,411-00 |
| 2 | 32/2008 | 93/2018 | ಸಾಂಬ್ರಾ | 96/2ಎ | 1-32-8 | 72,75,431-00 |
| 3 | 33/2008 | 108/2018 | ಸಾಂಬ್ರಾ | 208/8 | 0-11-0 | 10,84,409-00 |
| | | | ಒಟ್ಟು | | | **1,56,35,251-00** |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮೂಲಅಇ 86 ರಾಅವಿ 2019,**
**ಬೆಂಗಳೂರು ದಿನಾಂಕ:29.09.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದ ಜಮೀನುಗಳಿಗೆ ಸಂಬಂದಿಸಿದಂತೆ ಹೆಚ್ಚಿನ ಪರಿಹಾರ ಕೋರಿ ಮಾನ್ಯ ನ್ಯಾಯಾಲಯದಲ್ಲಿ ದಾಖಲಾದ ಎಲ್.ಎ.ಸಿ ಪ್ರಕರಣ ಸಂಖ್ಯೆ 31/2008,32/2008 ಮತ್ತು 33/2008ರಲ್ಲಿ ಮಾನ್ಯ ನ್ಯಾಯಾಲಯದ ತೀರ್ಪಿನನ್ವಯ ನ್ಯಾಯಾಲಯದಲ್ಲಿ ಠೇವಣಿ ಇಡಲು ರೂ. **1,56,35,251**/- (ಒಂದು ಕೋಟಿ ಐವತ್ತಾರು ಲಕ್ಷ ಮೂವತ್ತೈದು ಸಾವಿರದ ಇನ್ನೂರ ಐವತ್ತೊಂದು ರೂಪಾಯಿಗಳು ಮಾತ್ರ) ಗಳನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಬಿಡುಗಡೆಗೊಳಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2.ಈ ಮೊತ್ತವನ್ನು 2021-22ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ "5465-01-190-1-05-132-ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ-ಬಂಡವಾಳ-ವೆಚ್ಚ" ರಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

3.ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಖಾತೆಗೆ ಖಜಾನೆ-2ರ ಮುಖಾಂತರ ಅಪ್ ಲೋಡ್ ಮಾಡುವುದು. ಸದರಿ ಮೊತ್ತವನ್ನು ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಇವರಿಗೆ ಬಿಡುಗಡೆಗೊಳಿಸುವುದು.

4.ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ:05.04.2021 ರಲ್ಲಿ ನೀಡಿರುವ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kau

**(ಎಸ್.ಎನ್ ಕಲಾವತಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಒಳನಾಡು ಮತ್ತು ಜಲಸಾರಿಗೆ ಇಲಾಖೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-1,2,3/ ಎ&ಇ), ಪ್ರಧಾನ ಮಹಾಲೇಖಪಾಲರ ಕಚೇರಿ (ಕರ್ನಾಟಕ), ಎ.ಎ.ಡಿ ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಚೇರಿ ಎದುರು, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ.
4. ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಉಪ ವಿಭಾಗ, ಬೆಳಗಾವಿ.
5. ಆಯುಕ್ತರು/ನಿರ್ದೇಶಕರು, ಖಜಾನೆ ಇಲಾಖೆ, ವಿವಿ ಗೋಪುರ, ಬೆಂಗಳೂರು.
6. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ನಿರ್ದೇಶಕರು, PM & I ವಿಭಾಗ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು, ಒಳನಾಡು ಮತ್ತು ಜಲಸಾರಿಗೆ ಇಲಾಖೆ.
10. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು, ಒಳನಾಡು ಮತ್ತು ಜಲಸಾರಿಗೆ ಇಲಾಖೆ.
11. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು, ಒಳನಾಡು ಮತ್ತು ಜಲಸಾರಿಗೆ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ /ಬಿಡಿ ಪ್ರತಿಗಳು.